ಮತ್ತೆ ನವ್ಯ ಇದ್ದಲ್ಲ... ಅದೇ ಅವರಪ್ಪ ಹಾಲ್ ಹಾಕ್ತಾ ಇದನ್ನಲ್ಲ ಮನ್-ಮನೆಗೆ, ಅವ್ನು ಹೋಗ್ಬಿಟ್ನು; ಏನೋ ಗಂಡನ ಮನೇಲಿ ಟಾರ್ಚರ್ ಕೊಡ್ತಾ ಇದ್ರಂತೆ, ಅವ್ರಪ್ಪ ಅವಳ ಮಗೂನ ನೋಡ್ಕೊತ್ತಾ ಇನ್ನೂ ಹಾಲು ಹಾಕ್ತಾ ಇದ್ದಾರೆ... ಮತ್ತೆ ಸಂಗೀತಾ ಪೈ, ಅವ್ಳ ಅಕ್ಕಂದ್ರಿಗೆಲ್ಲ ಮದ್ವೆ ಆಯಿತು ಅವ್ಳು ಇನ್ನೂ ಹಂಗೇ ಇದ್ದಾಳೆ ಪಾಪ... ಸಂದೀಪ ಎಂಬಿಎ ಮಾಡಿ ಬೆಂಗಳೂರಲ್ಲಿದ್ದಾನೆ. ಅವನ್ಗೊಂದ್ ಹೆಣ್ಣ್ ಮಗು.... ಅರುಣಂದೆ ಕಾಮಿಡಿ; ಅವ್ರಪ್ಪ ಹೋಟ್ಲು ಇಟ್ಟ್ ಕೊಟ್ಟಿದ್ದ , ಇವ್ನ್ ಅದನ್ನ ಚೇಂಜ್ ಮಾಡಿ ಐಸ್ ಕ್ರೀಮ್ ಅಂಗ್ಡಿ ಇಟ್ಟ...ಮತ್ತೆ ಬೆಂಗ್ಳೂರಿಗೆ ಹೋಗಿ ನೋಡೀಲ್ ಐಸ್ ಕ್ರೀಂ ಪಾರ್ಲರ್ ಇಟ್ಟಿದ್ದಾನೆ... ಸ್ಲಿಪ್ ಡಿಸ್ಕ್ ಬೇರೆ ಆಯ್ತುಂತೆ; ಅರುಣಾ ಮದ್ವೆ ಆಗಿ ಹತ್ತು ವರುಷ ಆಯ್ತು ಆದ್ರೆ ಮಕ್ಳಿಲ್ಲ... ಹರಿಪ್ರಸಾದ ದುಬೈಯಲ್ಲಿದ್ದಾನೆ... ಒಂದು ವರ್ಷ ಅವನ ಮಗಂಗೆ; ಮೊನ್ನೆ ಬರ್ತ್ ಡೇ ಸೆಲೆಬ್ರೇಟ್ ಮಾಡಿದ್ರು.... ಇನ್ನ್ ಮಿಕ್ಕೋದು ನಾವು...'

'ನಾವು... ಬಿಡು... ಇಲ್ಲಿಯವರಿಗೆಲ್ಲ ನಾವು ಘಟ್ಟದವ್ರು ಅಂತ... ನಮ್ಮ ಅಪ್ಪಂದ್ರ ಕಾಲದ ಆ ಘಟ್ಟದ ಜನ್ರಿಗೆ ನಾವು ಇಲ್ಲಿಯೋರು ಅಂತ...'

'ಅದೇ ಬೆರೆಕೆಗೆ ಹುಟ್ಟಿದೋವ್ರು ನಾವುಗಳು.... ಸೋ ಮೈಸೂರಿಗೆ ಹೋಗ್ತಾ ಇದ್ಯಾ ಮತ್ತೆ'

'ಅದೇ ನೋಡ್ಬೇಕು ಇವತ್ತು ನಾಳೆ ನಮ್ಮ ಊರಲಿ ಕೆಲ್ಸ ಮುಗ್ಸಿ ಮತ್ತೆ ಬೆಂಗ್ಳೂರಿಗೆ ಹೋಗಕ್ಕಿಂತ ಮುಂಚೆ ಒಂದ್ಸಲ ಆ ಕಡೆ ಹೋಗ್ಬೇಕು...ಕೆಲವ್ ಸಲ್ ರಾತ್ರಿ ಎಚ್ಚರ ಆದಾಗ ನಾನ್ ಯಾವ್ ಊರಲಿದ್ದೀನಿ ಅಂತಾನೆ ಗೊತ್ತಾಗಲ್ಲ ಕನ್‌ಫ್ಯೂಸ್ ಆಗೋಗುತ್ತೆ...'

'ಈಗೇನ್ ಕೆಲ್ಸ್ ಸಿಕ್ತಾ ಮತ್ತೆ ಎಲ್ಲಾದ್ರೂ...'

'ಇಲ್ಲ ಕಣೋ ನೆಟ್ಟಗೆ ಎಲ್ಲೂ ವರ್ಕ್ ಔಟ್ ಆಗ್ತಾ ಇಲ್ಲ... ಈ ಫೋಟೊಗ್ರಫಿ ಕ್ರಾಶ್ ಕೋರ್ಸು ಕೈ ಹಿಡಿದ್ರೆ ಸಾಕು... ಈಗ ಪಾರ್ಟ್ ಟೈಮಲ್ಲಿ ಸ್ವಿಗ್ಗಿ ಡೆಲಿವರಿ ಮಾಡ್ತಾ ಇದ್ದೀನಿ.... ನೆಕ್ಸ್ಟ್ ಓಲಾದಲ್ಲಿ ಟ್ರೈ ಮಾಡ್ಬೇಕು... ಆಫಿಶಿಯಲ್ಲಾಗಿ ಕೆಲ್ಸ ಹುಡ್ಕಕ್ಕೆಲ್ಲ ತ್ರಾಣ ಇಲ್ಲ ಇನ್ನು... ವಯಸ್ಸಾಯಿತು...'

'ನಮ್ಮಮ್ಮ ಬೈಬಲ್, ರೋಸರಿ, ಕ್ರಿಸ್ತನ ಪವಾಡದ ಕಥೆಗಳು ಪುಸ್ತಕಗಳು... ಎಲ್ಲ ಮಾರಾಟ ಮಾಡಕ್ಕೆ ನಮ್ಮ ಮಾವ ಒಂದ್ ಶಾಪ್ ಇಟ್ಟುಕೊಟ್ಟಿದ್ದಾರೆ...ನಾನು ಆಗಾಗ ಅಲ್ಲಿ ಕೂರ್ತೀನಿ... ನೀನ್ ಬರ್ತೀಯಾ ಪುಸ್ತಕ ಮಾರೋಣ...'

'ಓಹ್ ಒಳ್ಳೇ ಪ್ಲಾನ್....! ಹೋಗಾ...!'

'ಹ್ವಿ...ಹ್ವಿ..ಹ್ವೀ... ಬಟ್ ಸ್ವಿಗಿ ಡೆಲಿವರಿಗಿಂತ ಸೇಫರ್...!'

'ಹೌದಪ್ಪ ಸೇಫ್... ಬಟ್ಸ್ ಇಲ್ಲಿ ಟೈಮ್ ಪಾಸ್ ಆಗುತ್ತೆ... ನಂಗೂ ನಾಯಿ-ಗೀಯಿ ಹಿಡಿಯಕ್ಕೆ ಗೊತ್ತಿದ್ರೆ ಮುನ್ಸಿಪಾಲಿಟಿಯಲ್ಲಾದ್ರೂ ಸೇರ್ಕೊಬೋದಿತ್ತು ಸದಾಶಿವನ ಜತೆ... ಅಲ್ಲಿ ಫಿಕ್ಸ್‌ಡ್ ಗರ್ವಮೆಂಟ್ ಸ್ಯಾಲರಿ ಆದ್ರೂ ಬರೋದು ಔಟ್ ಸೋರ್ಸ್ ಸ್ಟಾಫಾದ್ರೂ.... ಆ ಲಕ್ಕಿಲ್ಲ ಈಗ...! ಸೊ ಹೀಗೆ ಒಂದ್ ಐದ್ ವರ್ಷ ಸ್ವಿಗ್ಗಿ...ಓಲಾ... ಅಂತ ಹೋದ್ರೆ.... ನಲ್ವತ್ತ್ ಆಗುತ್ತೆ. ಮತ್ತೆ ಅದೂ ಇದೂ ಚೂರೂ ಪಾರು ಕೆಲ್ಸ. ಕೌಂಟರಲ್ಲಿಕೂರೋದು ವಾಚ್ಮನ್ ಆ ಥರ ಮಾಡ್ಕಂಡ್ ಕಳಿಬಹ್ದು... ಇಲ್ಲ ನಿನ್ನ್ ಮಾಮ ಏನಾದ್ರೂ ದಯೆ ತೋರಿಸಿದ್ರೆ ಸಣ್ಣ ಫೋಟೊಗ್ರಫಿ, ವೀಡಿಯೊಗ್ರಾಫಿ, ಪ್ರಿ, ಪೋಸ್ಟ್ ವೆಡ್ಡಿಂಗ್ಸ್ ಶೂಟೆಲ್ಲ ಟ್ರೈ ಮಾಡ್ಬಹುದು. ಆ ಥರ ಇನ್ನೊಂದು ಐದು ವರ್ಷ. ಇಲ್ಲಾ ಇವೆಲ್ಲಾ ಬಿಟ್ಟು ಈ ಪಾರ್ನ್ ಕ್ಯಾಸೆಟ್ ಯುಗ, ಆ ಬಿ ಸಿನಿಮಾಗಳು , ಕಾಮತ್ ವೀಡಿಯೋಸ್ ಅವಸಾನ ... ಇದರೆಲ್ಲದರ ಬಗ್ಗೆ ಮಾತಾಡಿ ಆ ವೀಡಿಯೋನೆಲ್ಲ ಯೂ ಟ್ಯೂಬಲ್ಲಿ ಅಪ್ಲೋಡ್ ಮಾಡೋದು ಎಲ್ಲ ಮಾಡಿ ಟೈಮ್ ಚೆನ್ನಾಗಿದ್ದು ಜಾಸ್ತಿ ಜನ ಸಬ್‌ಸ್ಕ್ರೈಬರ್ಸ್ ಸಿಕ್ಕಿದ್ರೆ ವ್ಲೋಗರ್ ಕಮ್ಮ್ ಅನಾಲಿಸ್ಟ್ ಆಗೀ ಸ್ವಲ್ಪ ಡಿಜಿಟಲ್ ಕಾಸ್ ಮಾಡ್ಬಹುದು. ಇವೆಲ್ಲಾ ಆಗೀನೂ ಹಿಂಗೆ ಇದ್ರೆ ಲೈಫು ಈ ಊರಲ್ಲಿ ಇರೋ ನಮ್ಮ ಹಳೆ ಮನೆ ಮಾರಿ ಒಂದಷ್ಟು ದುಡ್ಡಲ್ಲಿ ಊಟ ತಿಂಡಿ ಮಾಡ್ತಾ ಇನ್ನೊಂದ್ ಐದು ಹತ್ತು ವರುಷ. ಮತ್ತೆ ಇನ್ ಬಿಟ್ವೀನ್ ಪ್ರೈವೇಟ್ ಸ್ಕೂಲಲ್ಲಿ ಏನದ್ರೂ ಕೆಲ್ಸ ಸಿಕ್ಕಿದ್ರೆ. ಅಥವಾ ಯಾವಾದ್ರೂ ಹೋಟೆಲ್ ಅಲ್ಲಿ ಏನಾದ್ರೂ ಗಿಟ್ಟಿದ್ರೆ. ಹಂಗೆ ಇನ್ನೊಂದು ಹದಿನೈದು ವರ್ಷ ತಳ್ಳೋದು. ಇನ್ನೇನು ಮಾಡೋದು...! ಇಷ್ಟೆಲ್ಲ ಆಗೋವಾಗ ಹೇಗೋ ನನಗೆ ಅರವತ್ತು ಆಗುತ್ತೆ..'

'ಅರವತ್ತು ಆದ್ಮೇಲೆ...?'

'ಅರವತ್ತು ಆದ್ಮೇಲೆ... ಇನ್ನೇನು ಮ್ಯಾಕ್ಸಿ? ನಾನ್ ಹೋಗ್ಬಿಟ್ಟಿರ್ತಿನಲ್ಲ..'

●